ಶ್ರೀ ಹೆಚ್.ಕೆ ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತುಂಗಾ ಮೇಲ್ದಂಡೆ ಯೋಜನೆಯ ಚಾನಲ್ ಬಗ್ಗೆ ಪ್ರಸ್ತಾಪಿಸಿದ್ದಾರೆಂದು ಭಾವಿಸುತ್ತೇನೆ. ಉತ್ತರ ಇದಕ್ಕೆ ನೇರವಾಗಿ ಸಂಬಂಧವಿಲ್ಲದಿದ್ದರೂ ಅವರು ಪ್ರಸ್ತಾಪಿಸಿರುವುದರಿಂದ, ಆ ಊರಿನ ಬಳಿ ಹೋಗುವ ಚಾನಲ್ ಏನಿದೆ ಅದು ಬಹಳ ಆಳವಾಗಿರುವುದು ನಿಜ. ಆದುದರಿಂದ, ಊರಿನ ಸುತ್ತಲೂ ಹೋಗುವ ಚಾನಲ್ ಅನ್ನು ಬ್ಯೂಟಿಫಿಕೇಶನ್ ಮಾಡಿ ಯಾವುದೇ ರೀತಿಯಲ್ಲೂ ತೊಂದರೆ ಯಾಗದಂತೆ ಕ್ರಮ ಕೈಗೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ನಾನು ಭರವಸೆ ನೀಡುತ್ತೇನೆ. ಎರಡನೆಯದಾಗಿ, ತುಂಗಾ ಏತ ನೀರಾವರಿ ಯೋಜನೆಯ ಕಾಮಗಾರಿ ಕುರಿತು ಹೇಳುವುದಾದರೆ, ಸದರಿ ಯೋಜನೆ ಇನ್ನೂ ಪ್ರಾರಂಭವಾಗಿಲ್ಲ. ಅದನ್ನು ಟರ್ನ್-ಕೀ ಆಧಾರದ ಮೇಲೆ ಕಾಂಟ್ರಕ್ಟ್‌ನಲ್ಲಿ ಕಾರ್ಯನಿರ್ವಹಿಸುವ ಸಲುವಾಗಿ ಟೆಂಡರ್ ಕರೆಯುವ ಕಾರ್ಯಕ್ರಮವನ್ನು ಈಗಾಗಲೇ ಪ್ರಾರಂಭಿಸಲಾಗಿರುತ್ತದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ:- ಈ ವಿಚಾರಕ್ಕೆ ಸಂಬಂಧಿಸಿದಂತೆ, ನನ್ನ ಉಪ ಪ್ರಶ್ನೆ ಏನೆಂದರೆ, 1996-97 ನೇ ಇಸವಿಯಲ್ಲಿ ತುಂಗಾ ಚಾನಲ್‌ನಲ್ಲಿ ಹೂಳು ತೆಗೆಯುವ ವಿಚಾರದಲ್ಲಿ ಬಹಳ ಗೊಂದಲವುಂಟಾಗಿದ್ದರಿಂದ ಆ ಕುರಿತು ತನಿಖೆ ನಡೆಸುವುದಾಗಿ ಈ ಗಾಗಲೇ ಹಿಂದೆ ಹೇಳಿದ್ದೀರಿ. ಇದಕ್ಕೆ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದರೂ ಕಳಪೆ ಕೆಲಸವಾಗಿರುತ್ತದೆ. ಪ್ರಸಕ್ತ ವರ್ಷದ ಬೇಸಿಗೆಯಲ್ಲಿ ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಅನೇಕ ಜಮೀನಿಗೆ ನೀರು ಬರುವುದು ಕಷ್ಟವಾಯಿತು. ಆದುದರಿಂದ, ಕಳಪೆ ಕೆಲಸವಾಗಿರುವ ಬಗ್ಗೆ ಒಂದು ಸದನ ಸಮಿತಿ ರಚಿಸಿ, ತನಿಖೆಯಾದ ಬಳಿಕ ಹಣ ಬಿಡುಗಡೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್:- ತುಂಗಾ ಚಾನಲ್‌ನಲ್ಲಿ ಹೂಳೆತ್ತುವುದಕ್ಕೆ ಈ ಗಾಗಲೇ ನಾವು ಸುಮಾರು ರೂ. 11.99 ಲಕ್ಷದಷ್ಟು ಹಣವನ್ನು ಬಿಡುಗಡೆ ಮಾಡಿದ್ದು ನಿಜ. ಇದರಲ್ಲಿ ಇನ್ನೂ 48 ಲಕ್ಷ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ಸ್ ಇದ್ದು, ಮಾನ್ಯ ಶಾಸಕರು ಹೇಳಿರುವಂತೆ ಅಲ್ಲಿ ಏನಾದರೂ ಕಳಪೆ ಕಾಮಗಾರಿ ನಡೆದು ಅವ್ಯವಹಾರವಾಗಿದ್ದರೆ ಅದು ಅವರ ಗಮನಕ್ಕೆ ಬಂದಿದ್ದಲ್ಲಿ, ಅದನ್ನು ನಾವು ಗಮನಕ್ಕೆ ತಂದುಕೊಂಡು ಆ ಕುರಿತು ತನಿಖೆ ಮಾಡತಕ್ಕಂಥ ವ್ಯವಸ್ಥೆ ಮಾಡುವುದಾಗಿ ತಿಳಿಸಬಯಸುತ್ತೇನೆ.

ಆಹಾರ ಪಡಿತರ ಚೀಟಿಗಳ ಬಣ್ಣ ಬದಲಾವಣೆ

399(3844) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ - ಗ್ರಾಮೀಣ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಹಾರ ಪಡಿತರ ವಿತರಣೆಯ ಕಾರ್ಡುಗಳ ಈಗಿರುವ ಬಣ್ಣ ಯಾವುದು?

ಆ) ಹಾಲಿ ಇರುವ ಕಾರ್ಡು ಬದಲಾಗಿ ಹೊಸ ಬಣ್ಣದ ಕಾರ್ಡು ನೀಡಲು ಸರ್ಕಾರ ನಿರ್ಧರಿಸಿದೆಯೇ? ಇದ್ದಲ್ಲಿ ಬದಲಾಯಿಸಲು ಕಾರಣವೇನು?

ಇ) ಹಸಿರು ಕಾರ್ಡು ಬದಲಿಗೆ ಯಾವ ಬಣ್ಣದ ಕಾರ್ಡು ವಿತರಣೆ ಮಾಡಲು ತೀರ್ಮಾನ ಮಾಡಲಾಗಿದೆ. ಹೊಸ ಕಾರ್ಡಿನಲ್ಲಿ ಯಾರದ್ದಾದರೂ ಭಾವಚಿತ್ರವನ್ನು ಮುದ್ರಿಸಲು ಇಚ್ಛಿಸಿದೆಯೇ?

ಈ) ಈ ಯೋಜನೆಗೆ ಸರ್ಕಾರಕ್ಕೆ ತಗಲುವ ವೆಚ್ಚ ಎಷ್ಟು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :-

ಅ) ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ರಾಜ್ಯದಾದ್ಯಂತ ಹಾಲಿ 3 ಬಗೆಯ ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ.

1) ಹಸಿರು ಪಡಿತರ ಚೀಟಿ: ನಗರ ಪ್ರದೇಶದ ಕೊಳಚೆ ಪ್ರದೇಶಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ನೀಡಲಾಗುತ್ತಿದೆ.

2) ಕೇಸರಿ ಪಡಿತರ ಚೀಟಿ: ಗ್ರಾಮಾಂತರ ಪ್ರದೇಶದ ಬಡತನದ ರೇಖೆಯ ಮೇಲೆ ಇರುವ ಕುಟುಂಬಗಳಿಗೆ ನೀಡಿರುತ್ತದೆ.

3) ನೀಲಿ ಪಡಿತರ ಚೀಟಿ: (ಫೋಟೋ ಪಡಿತರ ಚೀಟಿ) ನಗರ ಪಟ್ಟಣ ಪ್ರದೇಶದಲ್ಲಿ ಬಡತನ ರೇಖೆಯ ಮೇಲೆ ಇರುವ ಕುಟುಂಬ ಗಳಿಗೆ ನೀಡಲಾಗುತ್ತಿದೆ.

ಆ) ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಆರ್ಥಿಕ ಸಮೀಕ್ಷೆ ಆಧರಿಸಿ ಗುರುತಿಸಲ್ಪಟ್ಟ ಬಡವರಿಗೆ ಮಾತ್ರ ಹಸಿರು ಕಾರ್ಡು ಬದಲು ಹಳದಿ ಬಣ್ಣ ಹೊಂದಿರುವ ಕಾರ್ಡುಗಳನ್ನು ವಿತರಿಸಲು ನಿರ್ಧರಿಸಲಾಗಿದೆ. ಹಾಲಿ ಹಸಿರು ಕಾರ್ಡುಗಳಿಗೆ ವಿತರಿಸುತ್ತಿರುವ ಆಹಾರ ಧಾನ್ಯಗಳ ದರ ಹೆಚ್ಚಳವಾದುದರಿಂದ, ಅರ್ಹ ಕಡು ಬಡವರಿಗೆ ಹೆಚ್ಚುವರಿ ರಾಜ್ಯ ಸರಕಾರದ ಸಹಾಯ ಧನ ನೀಡುವ ಸಲುವಾಗಿ ಈ ಯೋಜನೆ ರೂಪಿಸಲಾಗಿದೆ.

ಇ) ಹಸಿರು ಬಣ್ಣ ಬದಲಿಗೆ ಹಳದಿ ಬಣ್ಣದ ಕಾರ್ಡು ವಿತರಿಸಲು ಯೋಜಿಸಲಾಗಿದೆ ಪಡಿತರ ಚೀಟಿಯ ಮೇಲೆ ಮಹಾತ್ಮ ಗಾಂಧೀಜಿಯವರ ಭಾವಚಿತ್ರ ಮುದ್ರಿಸಲು ತೀರ್ಮಾನಿಸಲಾಗಿದೆ.

ಈ) ಒಂದು ವರ್ಷಕ್ಕೆ 78 ಕೋಟಿ ರೂಪಾಯಿಗಳ ಹೆ ಚ್ಚುವರಿ ಸಹಾಯಧನ ಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ ಮಹತ್ವದ ಪ್ರಶ್ನೆಯಾಗಿದ್ದು, ಇದುವರೆವಿಗೂ ಕಡು ಬಡವರಿಗೆ ಹಸಿರು ಪಡಿತರ ಚೀಟಿಯನ್ನು ವಿತರಿಸುವ ಯೋಜನೆ ಜಾರಿಯಲ್ಲಿತ್ತು. ಈಗ ಅದನ್ನು ಹಳದಿ ಪಡಿತರ ಚೀಟಿಯನ್ನಾಗಿ ಪರಿವರ್ತಿಸುವ ಕಾರ್ಯ ನಡೆದಿದೆ. ಈಗಾಗಲೇ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲೂ, ಗ್ರಾಮದಲ್ಲೂ ಹಳದಿ ಪಡಿತರ ಚೀಟಿಯನ್ನು ವಿತರಿಸುವಂಥ ವ್ಯವಸ್ಥೆಯಾಗುತ್ತಿದೆ. ಆದರೆ, ಹಸಿರು ಪಡಿತರ ಚೀಟಿಗೆ ಬದಲಾಗಿ ಹಳದಿ ಪಡಿತರ ಚೀಟಿಗಳನ್ನು ವಿತರಿಸಲು ವ್ಯವಸ್ಥೆ ಮಾಡಿರುವುದಕ್ಕೆ ಮಾನ್ಯ ಸಚಿವರು ಉತ್ತರದಲ್ಲಿ ಏನು ತಿಳಿಸಿದ್ದಾರೆಂದರೆ, ಹಾಲಿ ಹಸಿರು ಕಾರ್ಡುಗಳಿಗೆ ವಿತರಿಸುತ್ತಿರುವ ಆಹಾರ ಧಾನ್ಯಗಳ ದರ ಹೆಚ್ಚಳವಾದುದರಿಂದ ಅರ್ಹ ಕಡು ಬಡವರಿಗೆ ಹೆಚ್ಚುವರಿ ರಾಜ್ಯ ಸರ್ಕಾರದ ಸಹಾಯಧನ ನೀಡುವ ಸಲುವಾಗಿ ಈ ಯೋಜನೆ ರೂಪಿಸಲಾಗಿದೆ ಎಂದಿದ್ದಾರೆ. ಹಸಿರು ಪಡಿತರ ಚೀಟಿಗೆ ಬದಲಾಗಿ ಹಳದಿ ಪಡಿತರ ಚೀಟಿಯನ್ನು ವಿತರಿಸುವುದಕ್ಕೆ ಮಾರ್ಗಸೂಚಿ ಏನು? ಈ ಬಗ್ಗೆ ಸಮೀಕ್ಷಾ ಕಾರ್ಯ ನಡೆಸಿದ್ದೀರಾ? ಬಡತನ ರೇಖೆಗಿಂತಲೂ ಕೆಳಗಿರುವವರ (ಬಿಪಿಎಲ್) ಪಟ್ಟಿಯನ್ನು ಯಾವ ಆಧಾರದ ಮೇಲೆ ತಯಾಗಿಸಿದ್ದೀರಿ? ಸದರಿ ಪಟ್ಟಿಯೊಳಗೆ ಯಾರ್ಯಾರು ಬರುತ್ತಾರೆ? ನಾನು ರಾಜ್ಯದ ಯಾವ್ಯಾವ ತಾಲ್ಲೂಕುಗಳಲ್ಲಿ, ಭಾಗಗಳಲ್ಲಿ ಪ್ರವಾಸ ಮಾಡಿದ್ದೇನೋ ಅಲ್ಲಿನ ಪ್ರತಿಯೊಂದು ಕಡೆಯಿಂದಲೂ

ಈ ಬಗ್ಗೆ ದೂರುಗಳು ಇವೆ. ತಾವು ತಯಾಗಿಸಿರುವ ಸದರಿ ಪಟ್ಟಿಯೊಳಗೆ ಶ್ರೀಮಂತರು, ಜಮೀನ್ದಾರರು, ಮತ್ತು ನೌಕರ ವರ್ಗದವರೂ ಸಹ ಸೇರಿದ್ದಾರೆ. ಮತ್ತು ಅತಿಮುಖ್ಯವಾಗಿ ಸಮಾಜದ ಮುಖಂಡರೇನಿದ್ದಾರೆ, ಅವರ ಸಂಬಂಧಿಕರು, ಅಣ್ಣ-ತಮ್ಮಂದಿರು ಇವ್ವೊತ್ತಿನ ದಿವಸ ಹಳದಿ ಪಡಿತರ ಚೀಟಿ ಸೌಲಭ್ಯಗಳನ್ನು ಹೊಂದಿರುವುದು ರಾಜ್ಯದ ಪ್ರತಿಯೊಂದು ಭಾಗದಲ್ಲೂ ನಡೆಯುತ್ತಿರುವುದರಿಂದ ಸದರಿ ಪಟ್ಟಿಯೊಳಗೆ ಅರ್ಹರನ್ನು ಸೇರಿಸುವುದಕ್ಕೆ ಯಾವ ಮಾರ್ಗಸೂಚಿ ಹಾಕಿದ್ದೀರಿ? ಹಾಗೂ ಇದನ್ನು ಯಾವ ಆಧಾರದ ಮೇಲೆ ತಯಾರಿಸಿದ್ದೀರಿ? ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಡಿ.ಬಿ.ಇನಾಂದಾರ್ : ಮಾನ್ಯ ಅಧ್ಯಕ್ಷರೆ, ಈ ಪಟ್ಟಿಯನ್ನು 1997ರಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಒಂದು ಆರ್ಥಿಕ ಸಮೀಕ್ಷಾ ಕಾರ್ಯ ನಡೆಸಿ ಬಡತನ ರೇಖೆಗಿಂತ ಕೆಳಗಿರುವವರನ್ನು ಗುರ್ತಿಸಿದರು. ಇವ್ವೊತ್ತು ರಾಜ್ಯ ಸರ್ಕಾರದಿಂದ ವಿತರಿಸಿರುವ ಹಸಿರು ಪಡಿತರ ಚೀಟಿಗಳನ್ನು ತೆಗೆದು ಹಾಕುತ್ತೇವೆನ್ನುವಂಥ ಮಾತನ್ನು ನಾವು ಎಲ್ಲಯೂ ಸಹ ಹೇಳಿಲ್ಲ. ಹೆಚ್ಚುವರಿ ಕಡು ಬಡ ಜನರಿಗಿಂತ ಈ ಒಂದು ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂಬ ದೃಷ್ಟಿಯಿಂದ ಈ ಹೊಸ ಯೋಜನೆಯನ್ನು ಇವ್ವೊತ್ತು ರಾಜ್ಯ ಸರ್ಕಾರ ರೂಪಿಸಿದೆ. ತಾವು ಮಾತನಾಡುತ್ತಾ ಸರ್ಕಾರ ತಯಾರಿಸಿರುವ ಪಟ್ಟಿಯ ಬಗ್ಗೆ ಏನು ಹೇಳಿದ್ದೀರಿ, ನಾನು ಆ ಪಟ್ಟಿಯನ್ನು ಸಮರ್ಥಿಸುತ್ತಿಲ್ಲ, ಜೊತೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಯವರೂ ಸಹ ಅದನ್ನು ಸಮರ್ಥಿಸುತ್ತಿಲ್ಲ. ಈಗ ತಯಾರಿಸಿರುವ ಪಟ್ಟಿಎಲ್ಲಿ ನ್ಯೂನತೆಗಳು ಸಾಕಷ್ಟಿರುವುದರಿಂದ ಪಟ್ಟಿಯಲ್ಲಿ ಸೇರಿಸುವುದಕ್ಕೆ ಮತ್ತು ತೆಗೆದುಹಾಕುವುದಕ್ಕೆ ಸರ್ಕಾರದಿಂದ ನಾವು ಈಗಾಗಲೇ ಆದೇಶ ಹೊರಡಿಸಿದ್ದೇವೆ. ಇವ್ವೊತ್ತು ಅರ್ಹ ಕಡು ಬಡವರನ್ನು ಗುರ್ತಿಸತಕ್ಕಂಥವರು ಮತ್ತು ಅದನ್ನು ಸರ್ಟಿಫೈ ಮಾಡತಕ್ಕಂಥವರು ಯಾರೆಂದರೆ ಗ್ರಾಮಗಳಲ್ಲಿರತಕ್ಕ ಪಂಚಾಯತ್ ಕಾರ್ಯದರ್ಶಿಯವರು ಮತ್ತು ಗ್ರಾಮ ಲೆಕ್ಕಿಗರು ಹಾಗೂ ಫುಡ್ ಇನ್ಸ್‌ಪೆಕ್ಟರ್‌ರವರು ಪಡಿತರ ಚೀಟಿಗಳನ್ನು ವಿತರಿಸಬೇಕೆನ್ನುವಂಥ ವ್ಯವಸ್ಥೆ ಮಾಡುತ್ತಿದ್ದೇವೆ. ಆದರೆ, ಇದರ ಬಗ್ಗೆ ನಾವೆಲ್ಲರೂ ಯೋಜನೆ ಮಾಡಬೇಕಾದಂಥ ಪರಿಸ್ಥಿತಿ ಏಕೆ ಬಂದಿದೆಯೆಂದರೆ, ರಾಜ್ಯದಲ್ಲಿ ಕುಟುಂಬಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಅರ್ಹರಾದ ಕಡು ಬಡ ಕುಟುಂಬದವರಿಗೆ ಪಡಿತರ ಚೀಟಿ ಲಭ್ಯವಾಗಿರುವುದಿಲ್ಲ. ಈ ನಿಟ್ಟಿನಲ್ಲಿ ಅರ್ಹ ಕಡು ಬಡವರಿಗೆ ಪಡಿತರ ಚೀಟಿ ವಿತರಿಸುವಂಥ ವ್ಯವಸ್ಥೆಯನ್ನು ನಾವು ಇವ್ವೊತ್ತು ರೂಪಿಸುತ್ತಿದ್ದೇವೆ. ಈಗ ತಯಾರಿಸಿರುವ ಪಟ್ಟಿ ಬಗ್ಗೆ ತಾವು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ, ಇದನ್ನು ನಾನೂ ಕೂಡ ಒಪ್ಪುತ್ತಿದ್ದೇನೆ. ನಾನು ರಾಜ್ಯದ ಇತರ ಭಾಗಗಳಿಗೆ ಹೋದ ಕಡೆಗಳಲ್ಲೆಲ್ಲಾ ಸಂಬಂಧಿಸಿದವರಿಗೆ ಹೇಳುತ್ತಿರುವುದೇನೆಂದರೆ, ಈಗ ಸಿದ್ಧಪಡಿಸಿರುವ ಈ ಪಟ್ಟಿ ಸರಿಯಿಲ್ಲ, ಸದರಿ ಪಟ್ಟಿಯಲ್ಲಿ ಅನರ್ಹರಾದವರು ಬಹಳಷ್ಟು ಸಂಖ್ಯೆಯಲ್ಲಿ ಸೇರಿರುವುದರಿಂದ, ಅಂತಹವರನ್ನು ತೆಗೆದು ಹಾಕಿ, ಅರ್ಹರನ್ನು ಸೇರಿಸಿ ಅವರಿಗೆ ಪಡಿತರ ಚೀಟಿಗಳನ್ನು ಒದಗಿಸಿಕೊಡುವಂಥ ವ್ಯವಸ್ಥೆಯಾಗಬೇಕು. ಅದನ್ನು ನಾವು ಮಾಡುತ್ತೇವೆ ಎಂದು ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ತರಬೇಕೆಂಬ ದೃಷ್ಟಿಯಿಂದ ಪಡಿತರ ಚೀಟಿಗಳನ್ನು ವಿತರಿಸುವುದರ ಜೊತೆಗೆ ಒಂದು ಸೆಟ್ ಕೂಪನ್ ಅನ್ನು ಸಹ ಕೊಡಿಸತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಈ ಕೂಪನ್ ಪ್ರತಿಯೊಬ್ಬ ಪಡಿತರ ಚೀಟಿ ಹೊಂದಿರುವವರ ಬಳಿ ಇದ್ದು, ಇದನ್ನು ಸಂಗ್ರಹಿಸಿ ನ್ಯಾಯ ಬೆಲೆ ಅಂಗಡಿಗೆ ತೆಗೆದುಕೊಂಡು ಹೋಗಿ ಹೋಲ್‌ಸೇಲ್

ಆಗಿ ಕೊಟ್ಟರೆ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ವಹಿಸುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಅರ್ಹ ಬಡವರ್ಯಾರಾದರೂ ಉಳಿದಿದ್ದ ಪಕ್ಷದಲ್ಲಿ ಅಂತಹವರಿಗೆ ನಾವು ಅರ್ಜಿ ಕೊಟ್ಟ ಬಳಿಕ ಪಡಿತರ ಚೀಟಿಯನ್ನು ಒದಗಿಸಿಕೊಡುವಂಥ ವ್ಯವಸ್ಥೆ ಮಾಡುವುದಾಗಿ ತಮಗೆ ತಿಳಿಸಬಯಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ ಸಿದ್ಧಪಡಿಸಿರುವ ಪಟ್ಟಿಗೆ ಮತ್ತೆ ಹೊಸದಾಗಿ ಸೇರಿಸುವಂತಾದ್ದಲ್ಲ. ಸದರಿ ಪಟ್ಟಿಯಲ್ಲಿ ಬಹುತೇಕ ಸಂಖ್ಯೆಯಲ್ಲಿ ಅನರ್ಹರೇ ಸೇರಿದ್ದಾರೆ. ಪುನಃ ತಾವು ಹಳದಿ ಚೀಟಿಯನ್ನು ವಿತರಿಸುವಂತಾದರೆ ಅದನ್ನು ಕೂಡ ಅನರ್ಹರೇ ಪಡೆದುಕೊಂಡು ಕಡು ಬಡವರು ಪಡೆಯಬೇಕಾದಂಥ ಪ್ರಯೋಜನವನ್ನು ಅವರೇ ಪಡಿಯುವಂತಾದರೆ ಸರ್ಕಾರದ ಯೋಜನೆಯ ಉದ್ದೇಶ ಈಡೇರುವುದಾದರೂ ಹೇಗೆ? ಆದುದರಿಂದ, ಸಿದ್ಧಪಡಿಸಿರುವ ಪಟ್ಟಿಯ ಬಗ್ಗೆ ತಾವು ತಕ್ಷಣವೇ ಕೂಲಂಕಷವಾಗಿ ಮರು ವಿಚಾರಣೆ ಮಾಡಬೇಕು. ಮರು ವಿಚಾರಣೆ ಮಾಡುವವರೆಗೆ ಪಟ್ಟಿಯನ್ನು ಅಖೈರುಗೊಳಿಸಬಾರದು, ಪಟ್ಟಿಯನ್ನು ತಡೆಹಿಡಿಯಬೇಕು. ಇಲ್ಲದಿದ್ದರೆ, ಈ ಯೋಜನೆಯ ಲಾಭ ಅರ್ಹ ಕಡು ಬಡವರಿಗೆ ಸಿಗುವುದಿಲ್ಲ. ಬದಲಾಗಿ ಶ್ರೀಮಂತರು, ಜಮೀನ್ದಾರರು, ನೌಕರ ವರ್ಗದವರು ಸದರಿ ಯೋಜನೆಯ ಲಾಭ ಪಡೆದುಕೊಳ್ಳುತ್ತಾರೆ, ಕಡು ಬಡವರು ಕಡು ಬಡವರಾಗಿಯೇ ಉಳಿದುಕೊಳ್ಳುತ್ತಾರೆ. ಅರ್ಹ ಫಲಾನುಭವಿಗಳನ್ನು ಗುರ್ತಿಸುವುದು ಹಾಗೂ ಸರ್ಟಿಫೈ ಮಾಡುವುದು ಗ್ರಾಮಗಳಲ್ಲಿರುವ ಪಂಚಾಯತ್ ಕಾರ್ಯದರ್ಶಿಯವರು ಮತ್ತು ಗ್ರಾಸ ಲೆಕ್ಕಿಗರೆಂದು ಮಾನ್ಯ ಸಚಿವರು ಏನು ಹೇಳಿದರು, ಈ ಕುರಿತು ನಾನು ಹತೇಳುವುದಾದರೆ, ಪಡಿತರ ಚೀಟಿಗಳನ್ನು ಅವರು ತಮ್ಮ ಸಂಬಂಧಿಕರಿಗೆ, ಅಣ್ಣ-ತಮ್ಮಂದಿರಿಗೆ ಮತ್ತು ಬೇಕಾದವರಿಗೆ ಕೊಡುತ್ತಿದ್ದಾರೆ. ಇದಕ್ಕೆ ತಾವು ಬೇರೆ ವ್ಯವಸ್ಥೆ ಮಾಡಬೇಕು. ತಾವು ಈ ಪಟ್ಟಿಯನ್ನು ಹಾಗೂ ಪಟ್ಟಿಯ ಆಧಾರದ ಮೇಲೆ ವಿತರಿಸಿರುವಂಥ ಆಹಾರ ಪಡಿತರ ಸಮಿಕ್ಷೆ ನಡೆಸಿ ನಿಜವಾಗಿಯೂ ಅರ್ಹ ಫಲಾನುಭವಿಗಳು ಯಾರಿದ್ದಾರೆ, ಅವರಿಗೆ ಆಹಾರ ಪಡಿತರ ಚೀಟಿಗಳನ್ನು ವಿತರಿಸುವಂಥ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಜನರು ಆಕ್ರೋಶಗೊಂಡಿದ್ದು, ಪ್ರತಿಯೊಂದು ತಾಲ್ಲೂಕಿನಿಂದ, ಗ್ರಾಮದಿಂದಲೂ ಈ ಕುರಿತು ದೂರುಗಳು ಬರುತ್ತಿದ್ದು, ಬಡವರು ಸರ್ಕಾರದ ಮೇಲೆ ಸಿಟ್ಟುಗೊಂಡಿದ್ದು ಅವರ ಆಕ್ರೋಶ ಸರ್ಕಾರದ ಮೇಲೆ ಬೀಳುತ್ತಿರುವುದರಿಂದ ಇದರ ಬಗ್ಗೆ ಮಾನ್ಯ ಸಚಿವರು ವಿಚಾರ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಶ್ರೀ ಡಿ. ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಈ ಕುರಿತು ನಾನು ಹೇಳಬಯಸುವುದೇನೆಂದರೆ, ಈ ಪಟ್ಟಿ ಪೂರ್ಣವಾಗಿ ಸರಿ ಇದೆಯೆಂದು ಸರ್ಕಾರವೂ ಒಪ್ಪುತ್ತಿಲ್ಲ. ಪಟ್ಟಿಯಲ್ಲಿ ಬಹಳಷ್ಟು ಅನರ್ಹರು ಸೇರಿರುವುದರಿಂದ, ಅವರನ್ನು ತೆಗೆದುಹಾಕುವುದಕ್ಕೆ ಸರ್ಕಾರದಿಂದ ಈಗಾಗಲೇ ಆದೇಶ ಹೊರಡಿಸಿದ್ದೇವೆ ಹಾಗೂ ಅರ್ಹರನ್ನು ಪಟ್ಟಿಯೊಳಗೆ ಸೇರಿಸಿಕೊಳ್ಳಬೇಕೆನ್ನುವಂಥ ವಿಚಾರವನ್ನು ಕೂಡ ಆದೇಶದಲ್ಲಿ ತಿಳಿಸಲಾಗಿದೆ. ಈ ಕುರಿತು ಸರ್ಕಾರ ಹೊರಡಿಸಿರುವ ಎಲ್ಲಾ ಆದೇಶಗಳ ಒಂದೊಂದು ಪ್ರತಿಯನ್ನು ಪ್ರತಿಯೊಬ್ಬ ಮಾನ್ಯ ಶಾಸಕರುಗಳಿಗೂ ಮಾಹಿತಿಗಾಗಿ ಒದಗಿಸಿಕೊಡುವಂಥ ವ್ಯವಸ್ಥೆ ಮಾಡುತ್ತೇನೆ. ಈ ವ್ಯವಸ್ಥೆಯಲ್ಲಿ ನ್ಯೂನತೆಗಳು ಬಹಳಷ್ಟಿರುವುದರಿಂದ, ತಾವು ಹೇಳಿದಂತೆ, ನಾನು ರಾಜ್ಯದ ಇತರೆ ಭಾಗಗಳಿಗೆ ಪ್ರವಾಸ ಹೋದಂಥ ಸಂದರ್ಭದಲ್ಲಿ ಗ್ರಾಮಸಭೆಗಳನ್ನು ನಡೆಸಿದಾಗ ಪಟ್ಟಿಯೊಳಗೆ ಅನರ್ಹರಾದ

ನೌಕರಿಯಲ್ಲಿರುವಂತಹವರು, ಅವರ ಸಂಬಂಧಿಕರನ್ನು ಸೇರಿಸಿರುವುದರಿಂದ ಅವರೆಲ್ಲರನ್ನೂ ತೆಗೆದುಹಾಕಿ ಪಡಿತರ ಚೀಟಿಗಳನ್ನು ವಿತರಿಸುವಾಗ ಅವರು ಅರ್ಹರಿದ್ದಾರೆಯೇ? ಇಲ್ಲವೇ? ಎಂಬುದನ್ನು ಗಮನಿಸಿ ಅಧಿಕಾರಿಗಳು ಸರ್ಟಿಫೈ ಮಾಡಬೇಕು. ಪಟ್ಟಿ ಖಾಸಗಿ ದಾಖಲೆಯಾಗಿರದೆ ಸಾರ್ವಜನಿಕ ದಾಖಲೆಯಾಗಿರುವುದರಿಂದ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಸೂಚನಾ ಫಲಕದಲ್ಲಿ ಪ್ರಕಟಿಸಬೇಕು ಮತ್ತು ಗ್ರಾಮಸಭೆಗಳಲ್ಲಿ ಓದಿ ಹೇಳಬೇಕೆಂದೂ, ಓದಿ ಹೇಳಿದ ನಂತರ ಪಟ್ಟಿಯಲ್ಲಿ ಅರ್ಹರು ಸೇರಿದ್ದಾರೆಯೇ? ಇಲ್ಲವೇ? ಎಂಬುದನ್ನು ಗ್ರಾಮಸಭೆ ತೀರ್ಮಾನಿಸಬೇಕೆಂದೂ ಸಹ ನಾವು ಆದೇಶ ಹೊರಡಿಸಿದ್ದೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬಹಳ ಚೆನ್ನಾಗಿ ಥಿಯರಿ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇವತ್ತು ವಾಸ್ತವಿಕವಾಗಿ ಹಾದಿ ಬೀದಿಯಲ್ಲಿ ಹೋಗತಕ್ಕವರೆಲ್ಲರು ಕಾರ್ಡನ್ನು ಹಂಚುವ ಪರಿಸ್ಥಿತಿಯುಂಟಾಗಿದೆ. ಅವರಿಗೆ ಇಷ್ಟ ಬಂದವರಿಗೆ ಪಟ್ಟಿಯಲ್ಲಿ ಸೇರಿಸುತ್ತಾರೆ, ಅವರಿಗೆ ವಿರೋಧವಾಗಿರುವವರನ್ನು ಪಟ್ಟಿಯಿಂದ ತೆಗೆದು ಹಾಕುವ ಕೆಲಸ ವಾಸ್ತವಿಕವಾಗಿ ಆಗುತ್ತಿದೆ. ವಾಸ್ತವಿಕವಾಗಿರುವ ವಿಚಾರವನ್ನು ಬದಿಗಿಟ್ಟು ಇವರ ಥಿಯರಿ ಹೇಳಿದರೆ ನಾವು ಇದರಿಂದ ಏನು ಕಲಿತುಕೊಳ್ಳೋಣ?

ಶ್ರೀ ಡಿ.ಬಿ. ಇನಾಂದಾರ್ : ಈ ಥಿಯರಿ ಮತ್ತು ಪ್ರಾಕ್ಟಿಕಲ್ಸ್ ಬಗ್ಗೆ ತಮಗೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ, ದಯಮಾಡಿ ಕೇಳಿ. ಹಸಿರು ಕಾರ್ಡನ್ನು ಎಷ್ಟು ಜನರಿಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2,33,644 ಕುಟುಂಬಗಳು ಇದ್ದರೆ ಹಸಿರು ಕಾರ್ಡುಗಳು 3,16,769 ಇದೆ. ಅಂದರೆ ಸುಮಾರು 135 ಪರ್‌ಸೆಂಟ್ ಹೆಚ್ಚಾಗಿ ಹಸಿರು ಕಾರ್ಡುಗಳನ್ನು ಹಂಚಲಾಗಿದೆ. ಇವೆಲ್ಲವನ್ನು ಹೋದ ವರ್ಷದ ಮಾರ್ಚ್ 31ರಲ್ಲಿ ಹಂಚಲಾಗಿದೆ. ಇವೆಲ್ಲಾ ನಮ್ಮ ವ್ಯವಸ್ಥೆಯಲ್ಲಿ ಇರತಕ್ಕದ್ದು. ಇದನ್ನು ಅವರ ಸರ್ಕಾರ ಇದ್ದಾಗಲೇ ಕೊಟ್ಟಿರತಕ್ಕದ್ದು.

ಶ್ರೀ ಸಿ.ಬೈರೇಗೌಡ : ತಾವು ಸುಮ್ಮನೆ ಇಲ್ಲದೇ ಇರುವುದನ್ನು ಏಕೆ ಹೇಳುತ್ತೀರಿ? ಇದು ಕ್ಷಮೆಯಾರ್ಹವಲ್ಲ. ನಾವು ಅಧಿಕಾರದಲ್ಲಿ ಇದ್ದಾಗ ತಪ್ಪು ಮಾಡಿದ್ದರೆ ಅದೂ ಕೂಡ ತಪ್ಪೇ. ಆ ತಪ್ಪನ್ನು ಹೊರಲು ಸಿದ್ದನಾಗಿದ್ದೇನೆ. ಆದರೆ ತಾವು ಈ ರೀತಿ ಸಬೂಬುಗಳನ್ನು ಹೇಳುವುದು ಬೇಕಾಗಿಲ್ಲ.

ಅಧ್ಯಕ್ಷರು : ಇದು ಬಹಳ ಮುಖ್ಯವಾದ ಪ್ರಶ್ನೆ. ಅವರೇನು ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಕೇಳಿದ್ದಾರೆ ಆಗ ತಾವುಗಳೆಲ್ಲ ಇದರ ಬಗ್ಗೆ ಪ್ರಶ್ನೆ ಮಾಡಿ. ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು.

ಶ್ರೀ ವಿಜಯಕುಮಾರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಇನ್ನೂ ಆರು ಪ್ರಶ್ನೆಗಳು ಇದೆ. ದಯಮಾಡಿ ಅದಕ್ಕೆಲ್ಲಾ ಅವಕಾಶ ಕೊಡಿ. ಎಲ್ಲವೂ ಲ್ಯಾಪ್ಸ್ ಆಗುವ ಸಾಧ್ಯತೆಗಳು ಇದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಬೇರೆ ವಿಚಾರಗಳನ್ನು ಚರ್ಚೆ ಮಾಡಬೇಡಿ ಎಂದು ನಾನು ಮೊದಲೇ ಹೇಳಿದ್ದೇನೆ. ನಿಗದಿಯಾದ ಅವಧಿಗಿಂತ ಇನ್ನೂ ಹತ್ತು ನಿಮಿಷ ಜಾಸ್ತಿ ಚರ್ಚೆ ಮಾಡಿದ್ದೇವೆ. ಈ ಪ್ರಶ್ನೆಗಳನ್ನು ಇನ್ನೊಂದು ದಿವಸ ಯಾವಾಗಲಾದರೂ ತೆಗೆದುಕೊಳ್ಳುವ ಬಗ್ಗೆ ಏರ್ಪಾಡು ಮಾಡೋಣ. ಮಾನ್ಯ ಸಿಂಧ್ಯರವರೆ, ತಮಗೆ ಎಲ್ಲಾ ಗೊತ್ತಿದೆ. ನಾವು ಒಂದು ದಿವಸ ಅವಕಾಶ